ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

ಕೆಎಸ್‌ಕ್ಯುಎಎಸಿ, ಮಲ್ಲೇಶ್ವರಂ, ಬೆಂಗಳೂರು–560003.

KARNATAKA SCHOOL EXAMINATION AND ASSESSMENT BOARD

KSQAAC, Malleshwaram, Bengaluru–560003.

ಮೌಲ್ಯಾಂಕನ – ಮಾರ್ಚ್ 2024 – ಮಾದರಿ ಪ್ರಶ್ನೋತ್ತರ ಪತ್ರಿಕೆ

Assessment - March 2024 Model Paper

ತರಗತಿ : 5

ವಿಷಯ : ಪರಿಸರ ಅಧ್ಯಯನ

ಮಾಧ್ಯಮ : ಕನ್ನಡ

ಅಂಕಗಳು : 40

ಸಮಯ : 2 ಗಂಟೆ

ವಿದ್ಯಾರ್ಥಿಗಳು ಭರ್ತಿ ಮಾಡಬೇಕಾಗಿರುವ ಮಾಹಿತಿ

ವಿದ್ಯಾರ್ಥಿಯ ಹೆಸರು : ______________________

ವಿದ್ಯಾರ್ಥಿಯ SATS ಸಂಖ್ಯೆ : | | | | | | | | | | ವಿದ್ಯಾರ್ಥಿಯ ಸಹಿ : ____________

ಕೊಠಡಿ ಮೇಲ್ವಿಚಾರಕರು ಭರ್ತಿ ಮಾಡಬೇಕಾಗಿರುವ ಮಾಹಿತಿ

ಶಾಲೆಯ ಡೈಸ್ ಕೋಡ್ : | | | | | | | | | | | |

ಶಾಲೆಯ ಹೆಸರು : ______________________

ಕ್ಲಸ್ಟರ್ : ____________ ಬ್ಲಾಕ್ : ____________ ಜಿಲ್ಲೆ : ____________

ಶಾಲೆಯ ವಿಧ : ಸರ್ಕಾರಿ ☐ ಅನುದಾನಿತ ☐ ಅನುದಾನ ರಹಿತ ☐

(ಅನ್ವಯಿಸುವ ಮಾಹಿತಿಗೆ "✓" ಗುರುತು ಹಾಕಿರಿ)

ಕೊಠಡಿ ಮೇಲ್ವಿಚಾರಕರ ಸಹಿ : ____________

ಮೌಲ್ಯಮಾಪನ ಸಮಯದಲ್ಲಿ ಶಿಕ್ಷಕರು ಭರ್ತಿ ಮಾಡಬೇಕಾದ ಮಾಹಿತಿ

ಪ್ರಶ್ನೆ ಸಂಖ್ಯೆ	ಪಡೆದ ಅಂಕಗಳು	ಪ್ರಶ್ನೆ ಸಂಖ್ಯೆ	ಪಡೆದ ಅಂಕಗಳು	ಪ್ರಶ್ನೆ ಸಂಖ್ಯೆ	ಪಡೆದ ಅಂಕಗಳು
1		11		21	
2		12		22	
3		13		23	
4		14		24	
5		15		–	
6		16		–	
7		17		–	
8		18		–	
9		19		–	
10		20		–	
ಒಟ್ಟು ಅಂಕಗಳು		ಒಟ್ಟು ಅಂಕಗಳು		ಒಟ್ಟು ಅಂಕಗಳು	
				ಒಟ್ಟು ಗಳಿಸಿದ ಅಂಕ	

ಒಟ್ಟು ಗಳಿಸಿದ ಅಂಕಗಳು (ಅಕ್ಷರಗಳಲ್ಲಿ) ______________________

s QP

ಮೌಲ್ಯಮಾಪಕರ ಸಹಿ : ____________

ಮೌಲ್ಯಮಾಪಕರ ಹೆಸರು : ____________

I. 1 ರಿಂದ 20 ರವರೆಗಿನ ಪ್ರಶ್ನೆಗಳಿಗೆ ನೀಡಲಾಗಿರುವ ನಾಲ್ಕು ಆಯ್ಕೆಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ನಿಗದಿಪಡಿಸಿರುವ ಸ್ಥಳದಲ್ಲಿ ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. [12 x 1 = 20]

1. ಇದು ಸಸ್ಯಮೂಲದ ಆಹಾರ ಪದಾರ್ಥಗಳ ಸರಿಯಾದ ಜೋಡಿಯಾಗಿದೆ,

A. ಬೆಣ್ಣೆ – ಮಜ್ಜಿಗೆ B. ಹಾಲು – ತುಪ್ಪ

C. ಧಾನ್ಯಗಳು – ತರಕಾರಿಗಳು D. ಮೊಟ್ಟೆ – ಮಾಂಸ

ಉತ್ತರ: ☐ ______________________________

2. ಬಾಲಕನೊಬ್ಬನಿಗೆ ಬೊಜ್ಜಿನ ಸಮಸ್ಯೆ ಉಂಟಾಗಿದೆ. ವೈದ್ಯರ ಯಾವ ಸಲಹೆಯಿಂದ ಅದರ ನಿವಾರಣೆ ಸಾಧ್ಯವಿಲ್ಲ.

A. ನಿಯಮಿತ ವ್ಯಾಯಾಮ ಮಾಡುವುದು B. ಪೋಷಕಾಂಶ ಭರಿತ ಆಹಾರ ಸೇವನೆ

C. ನಿಗದಿತ ಸಮಯಕ್ಕೆ ಆಹಾರ ಸೇವನೆ D. ಜಂಕ್‌ಫುಡ್‌ಗಳ ಅನಿಯಮಿತ ಬಳಕೆ

ಉತ್ತರ: ☐ ______________________________

3. ವೈಯಕ್ತಿಕ ವಸತಿಯನ್ನು ಪ್ರತಿನಿಧಿಸುವ ಸರಿಯಾದ ಹೇಳಿಕೆ,

A. ಕೇವಲ ಒಂದೇ ಕುಟುಂಬ ವಾಸವಾಗಿರುವ ಕಟ್ಟಡ

B. ಹಲವು ಕುಟುಂಬಗಳು ಒಂದೆಡೆ ವಾಸಿಸುತ್ತವೆ

C. ಕಡಿಮೆ ಭೂಮಿಯಲ್ಲಿ ಅತಿ ಹೆಚ್ಚಿನ ಜನಸಂಖ್ಯೆಗೆ ವಸತಿ ವ್ಯವಸ್ಥೆ

D. ಮೂಲಭೂತ ಸೌಲಭ್ಯಗಳು ಒಂದೇ ಕಡೆ ದೊರೆಯುವುದು

ಉತ್ತರ: ☐ ______________________________

4. ಮಂಜುಗಡ್ಡೆ ———> ನೀರು ———> ನೀರಾವಿ

ಮೇಲಿನ ಪ್ರಕ್ರಿಯೆಯನ್ನು ಪ್ರತಿನಿಧಿಸುವ ಸರಿಯಾದ ಹರಿವು ನಕ್ಷೆ

A. ಘನ —ತಂಪು→ ದ್ರವ —ತಂಪು→ ಅನಿಲ

B. ಘನ —ಬಿಸಿ→ ಅನಿಲ —ಬಿಸಿ→ ದ್ರವ

C. ಘನ —ಬಿಸಿ→ ದ್ರವ —ಬಿಸಿ→ ಅನಿಲ

D. ಘನ —ತಂಪು→ ಅನಿಲ —ಬಿಸಿ→ ದ್ರವ

ಉತ್ತರ: ☐ ____________________

5. ಮನೆಯಲ್ಲಿನ ನೀರಿನ ಪಾತ್ರೆಗೆ ಆಕಸ್ಮಿಕವಾಗಿ ಅಡುಗೆ ಎಣ್ಣೆಯು ಬೆರೆತಿದೆ.

ಈ ಪ್ರಕ್ರಿಯೆಯ ಪರಿಣಾಮ ಮತ್ತು ಕಾರಣ,

A. ನೀರಿನ ಸಾಂದ್ರತೆ ಕಡಿಮೆ ಇರುವುದರಿಂದ ಎಣ್ಣೆಯು ನೀರಿನ ಮೇಲಿದೆ

B. ನೀರಿನ ಸಾಂದ್ರತೆ ಹೆಚ್ಚಾಗಿರುವುದರಿಂದ ಎಣ್ಣೆಯು ನೀರಿನ ತಳದಲ್ಲಿದೆ

C. ಎಣ್ಣೆಯ ಸಾಂದ್ರತೆ ಹೆಚ್ಚಾಗಿರುವುದರಿಂದ ನೀರಿನ ತಳದಲ್ಲಿದೆ

D. ಎಣ್ಣೆಯ ಸಾಂದ್ರತೆ ಕಡಿಮೆ ಇರುವುದರಿಂದ ಎಣ್ಣೆಯು ನೀರಿನ ಮೇಲಿದೆ

ಉತ್ತರ: ☐ ____________________

6. ಇದು ನೈಸರ್ಗಿಕ ಧಾತುವಿಗೆ ಒಂದು ಉದಾಹರಣೆಯಾಗಿದೆ,

A. ಕಬ್ಬಿಣ B. ಪ್ಲುಟೋನಿಯಮ್ C. ನೀರು D. ಮಣ್ಣು

ಉತ್ತರ: ☐ ____________________

7. ಕಬ್ಬಿಣ ಮತ್ತು ಗಂಧಕಗಳು ಬೆರೆತಾಗ, ಅವು ತಮ್ಮ ಮೂಲ ಲಕ್ಷಣಗಳನ್ನು ಉಳಿಸಿಕೊಂಡಿರುತ್ತವೆ. ಹಾಗಾದರೆ ಉಂಟಾದ ವಸ್ತುವು ಈ ಗುಂಪಿಗೆ ಸೇರುತ್ತದೆ.

A. ಸಂಯುಕ್ತಗಳು B. ಮಿಶ್ರಣಗಳು

C. ಧಾತುಗಳು D. ಪರಮಾಣುಗಳು

ಉತ್ತರ: ☐ ____________________

8. ಟಿ.ವಿ.ಯ ರಿಮೋಟ್‌ಗಳು ಕೆಲಸ ಮಾಡಲು ಸಾಮಾನ್ಯವಾಗಿ ಬಳಸುವ ಶಕ್ತಿಯ ರೂಪ,

A. ರಾಸಾಯನಿಕ ಶಕ್ತಿ B. ಜೈವಿಕ ಶಕ್ತಿ

C. ಸ್ನಾಯು ಶಕ್ತಿ D. ಉಷ್ಣ ಶಕ್ತಿ

ಉತ್ತರ: ☐ ____________________

9. 'X' ಪಟ್ಟಿಯಲ್ಲಿ ಕೆಲವು ಚಟುವಟಿಕೆಗಳು ಮತ್ತು 'Y' ಪಟ್ಟಿಯಲ್ಲಿ ಅದರಿಂದ ಉಳಿಸಬಹುದಾದ ಶಕ್ತಿಯ ಆಕರಗಳನ್ನು ನೀಡಿದೆ. ಅವುಗಳಲ್ಲಿ ಸರಿಯಾಗಿ ಹೊಂದಿಸದ ಜೋಡಿ,

	'X'		'Y'
A.	ಹತ್ತಿರದ ಸ್ಥಳಗಳಿಗೆ ನಡಿಗೆ	-	ಇಂಧನ ಶಕ್ತಿ
B.	ಬಿಸಿಲಲ್ಲಿ ಕೂದಲು ಒಣಗಿಸುವುದು	-	ವಿದ್ಯುತ್ ಶಕ್ತಿ
C.	ಮಡಿಕೆಯಲ್ಲಿ ನೀರು ತಂಪಾಗಿಸುವುದು	-	ಇಂಧನ ಶಕ್ತಿ
D.	ಮೊಬೈಲ್ ಫೋನ್ ಕಡಿಮೆ ಬಳಸುವುದು	-	ರಾಸಾಯನಿಕ ಶಕ್ತಿ

ಉತ್ತರ: ☐ ____________________

10. ಸೂರ್ಯನಿಗೆ ಅತ್ಯಂತ ಹತ್ತಿರದಲ್ಲಿರುವ ಗ್ರಹ,

A. ಶುಕ್ರ B. ಬುಧ C. ಭೂಮಿ D. ಶನಿ

ಉತ್ತರ: ☐ ____________________

11. ಹಿಮಾಲಯ ಪರ್ವತದ ತಗ್ಗು ಭಾಗಗಳಲ್ಲಿರುವ ಸಮತಟ್ಟಾದ ನೀಳ ಹಾಗೂ ವಿಶಾಲವಾದ ಭಾಗಗಳು,

A. ಪರ್ವತ ಶ್ರೇಣಿ B. ಅರಾವಳಿ

C. ಡೂನ್ D. ಪರ್ವತ ಶಿಖರ

ಉತ್ತರ: ☐ ____________________

12. ಇದು ಒಂದು ಕೇಂದ್ರಾಡಳಿತ ಪ್ರದೇಶವಲ್ಲ,

A. ದಿಯು – ದಾಮನ್ B. ಪುದುಚೆರಿ

C. ಚಂಡೀಘರ್ D. ಮಣಿಪುರ

ಉತ್ತರ: ☐ ____________________

II. 13 ರಿಂದ 24 ರವರೆಗಿನ ಪ್ರಶ್ನೆಗಳಿಗೆ ನಿಗದಿಪಡಿಸಿರುವ ಸ್ಥಳದಲ್ಲಿ ಉತ್ತರಿಸಿ.

13. ಶೀತಕ ಸಂಗ್ರಹಣೆ ವ್ಯವಸ್ಥೆ ಇಲ್ಲದ ಮನೆಯಲ್ಲಿ ಆಹಾರ ಪದಾರ್ಥಗಳು ಕೆಡದಂತೆ ಸಂರಕ್ಷಿಸುವ ಎರಡು ವಿವಿಧ ಕ್ರಮಗಳನ್ನು ಉದಾಹರಣೆಯೊಂದಿಗೆ ಸೂಚಿಸಿರಿ. **2 ಅಂಕ**

____

____

____

____

14. ಹಳ್ಳಿಯೊಂದು 'ಉತ್ತಮ ಗ್ರಾಮ' ಪ್ರಶಸ್ತಿಗೆ ಭಾಜನವಾಗಿದೆ. ಆ ಪ್ರಶಸ್ತಿಗೆ ಅರ್ಹವಾಗಲು ಆ ಗ್ರಾಮವು ಹೊಂದಿರಬೇಕಾದ ನಾಲ್ಕು ಅಂಶಗಳನ್ನು ಪಟ್ಟಿ ಮಾಡಿ. 2 ಅಂಕ

15. ದ್ರವ್ಯದ ಎರಡು ಲಕ್ಷಣಗಳು ಯಾವುವು ? 2 ಅಂಕ

16. ಸಂಪೂರ್ಣ ಸಾಂಬಾರು ತುಂಬಿರುವ ಪಾತ್ರೆಗೆ ನಾವು ಉಪ್ಪನ್ನು ಹಾಕಿದರೂ, ಸಾಂಬಾರು ಹೊರ ಚೆಲ್ಲುವುದಿಲ್ಲ ಯಾಕೆ ? 2 ಅಂಕ

17. ನಾಲ್ಕು ಸಂಯುಕ್ತ ವಸ್ತುಗಳಿಗೆ ಉದಾಹರಣೆ ಕೊಡಿ. 2 ಅಂಕ

18. ಸ್ನಾಯುಶಕ್ತಿಯಿಂದ ಮಾಡುವ ನಾಲ್ಕು ಕೆಲಸಗಳನ್ನು ತಿಳಿಸಿರಿ. 2 ಅಂಕ

19. ಕೋಷ್ಟಕವನ್ನು ಸೂಕ್ತ ಉತ್ತರಗಳಿಂದ ಭರ್ತಿ ಮಾಡಿರಿ. 2 ಅಂಕ

ಶಕ್ತಿಯ ರೂಪ	ಬದಲಾದ ಶಕ್ತಿಯ ರೂಪ	ಚಟುವಟಿಕೆ
ಸ್ನಾಯು ಶಕ್ತಿ	ಯಾಂತ್ರಿಕ ಶಕ್ತಿ	
ವಿದ್ಯುತ್ ಶಕ್ತಿ		ಫ್ಯಾನ್‌ನ ಚಲನೆ
	ಉಷ್ಣ ಶಕ್ತಿ	ಧಾನ್ಯಗಳನ್ನು ಒಣಗಿಸುವುದು
ಇಂಧನ ಶಕ್ತಿ	ಉಷ್ಣ ಶಕ್ತಿ	

20. ಸೌರವ್ಯೂಹದ ಚಿತ್ರ ರಚಿಸಿ. ಈ ಕೆಳಗಿನ ಆಕಾಶ ಕಾಯಗಳನ್ನು ಗುರುತಿಸಿ. **2 ಅಂಕ**

A. ಕೆಂಪುಗ್ರಹ B. ಯುರೇನಸ್

21. ನಮ್ಮ ರಾಜ್ಯದ ಯಾವುದಾದರೂ ನಾಲ್ಕು ನದಿಗಳನ್ನು ಹೆಸರಿಸಿ. 2 ಅಂಕ

22. ಭಾರತ ಸರ್ಕಾರವು ಸಾಧಕರಿಗೆ ರಾಷ್ಟ್ರಮಟ್ಟದಲ್ಲಿ ನೀಡುವ ಯಾವುದಾರೂ ನಾಲ್ಕು ಗೌರವ ಪ್ರಶಸ್ತಿಗಳನ್ನು ಪಟ್ಟಿ ಮಾಡಿರಿ. 2 ಅಂಕ

23. ಮೈದಾನ ಪ್ರದೇಶಗಳಲ್ಲಿ ವಾಸ್ತುಶಿಲ್ಪಗಳ ರಚನೆಗೆ ಸಹಕಾರಿಯಾಗಿರುವ ನಾಲ್ಕು ಅಂಶಗಳನ್ನು ಪಟ್ಟಿ ಮಾಡಿರಿ. 4 ಅಂಕ

24. ಕೊಟ್ಟಿರುವ ಭಾರತದ ನಕ್ಷೆಯಲ್ಲಿ ಕೆಳಗಿನವುಗಳನ್ನು ಗುರುತಿಸಿ, ಹೆಸರಿಸಿ. **4 ಅಂಕ**

A. ಭಾರತದ ದಕ್ಷಿಣದ ನೆರೆ ರಾಷ್ಟ್ರ

B. ಭಾರತದ ಪಶ್ಚಿಮದಲ್ಲಿರುವ ಸಮುದ್ರ

C. ಭಾರತದ ರಾಜಧಾನಿ

D. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು